ದಿನಾಂಕಃ 02.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ಸುಬ್ಬಮ್ಮ ಎಂಬುವವರು ನನ್ನ ಅತ್ತೆ. ನಿಪಿ-6 ರಲ್ಲಿ ನನ್ನ ಗಂಡ ರುದ್ರೇಶ್ ರವರು ತಹಶೀಲ್ದಾರ್ ರವರಿಗೆ ಸ.ನಂ.26 ರಲ್ಲಿ 30*40 ವಿಸ್ತೀರ್ಣದ ಜಮೀನು ನನ್ನ ಅತ್ತೆಯಾದ ಸುಬ್ಬಮ್ಮ ರವರಿಗೆ ಮಂಜೂರಾಗಿರುತ್ತದೆ ಎಂದು ಅರ್ಜಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ನನ್ನ ಗಂಡನ ಬಳಿ ಸಾಕ್ಷಿಯನ್ನು ನುಡಿಯುವ ಬಾಬ್ತು ವಿಚಾರಿಸಿಕೊಂಡು ಬಂದಿರುತ್ತೇನೆ. ನಿಪಿ-6 ರಲ್ಲಿ ಸುಬ್ಬಮ್ಮ ರವರ ಮರಣದ ನಂತರ ಜಯ ಕೋಂ ಅಣ್ಣಪ್ಪ ರವರಿಗೆ 30*40 ವಿಸ್ತೀರ್ಣದ ಜಮೀನು ಮಂಜೂರಿಯಾಗಿರುತ್ತದೆ ಎಂದು ನಮೂದಿರುವ ವಿಷಯ ನನಗೆ ತಿಳಿದಿದೆ ಎಂದರೆ ಸರಿ. ನಿಪಿ-6 ರಲ್ಲಿ ನಮೂದಿಸಿರುವ ಆಸ್ತಿಯೇ ದಾವಾ ಶೆಡ್ಯೂಲ್ ನಲ್ಲಿ ನಮೂದಿಸಿರುವ ಆಸ್ತಿ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರುಕ್ಮಿಣಿಯವರ ಮನೆ, ಉತ್ತರಕ್ಕೆ ಕರಿಯಪ್ಪ ರವರ ಮನೆ ಮತ್ತು ದಕ್ಷಿಣ ದಿಕ್ಕಿಗೆ ಹೂವಮ್ಮ ರವರ ಮನೆ ಇರುತ್ತದೆ. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತಿನ ಚೆಕ್ಕುಬಂದಿಯು ನನಗೆ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಮಂಜೂರಾಗಿದ್ದ ದಾವಾ ಸ್ವತ್ತು ಈಗ ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಂಜೂರಾಗಿರುವುದು ರದ್ದಾಗಿರುವ ವಿಷಯ ನನಗೆ ತಿಳಿದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆದ ಕಾರಣ ಈ ಪ್ರಕರಣಕ್ಕೆ ಸಂಬಂದ ಇಲ್ಲದಿದ್ದರೂ ನಿಪಿ-6 ರಿಂದ 10ರ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು ನನ್ನ ಹೆಸರಿಗೆ ಮೋಸದಿಂದ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಮತ್ತು ನಾನು ಹಾಜರುಪಡಿಸಿರವ ದಾಖಲಾತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.